

## ಮುತ್ತು

ನಾನಾಗ ಚಿಕ್ಕವಳಿದ್ದೆ. ಖರೀದಿಗೆಂದು ಅಮ್ಮ, ಅಕ್ಕ, ಚಿಕ್ಕಮ್ಮ ಮತ್ತು ನಾನು ನಮ್ಮೂರಿನಿಂದ 30 ಕಿಲೋಮೀಟರ್ ದೂರದ ತೀರ್ಥಹಳ್ಳಿಗೆ ಹೋಗಿದ್ದೆವು. ಆ ದಿನ ಬಳೆ ಅಂಗಡಿಯಲ್ಲಿ ಬಹಳ ಜನರಿದ್ದರು. ಎಲ್ಲರೂ ತಮಗೆ ಬೇಕಾದ್ದನ್ನು ತೆಗೆದುಕೊಂಡು ಮರಳಲು ಸಾಕಷ್ಟು ಸಮಯ ಹಿಡಿದಿತ್ತು. ಸಂಜೆ ಎಲ್ಲರೂ ಮನೆಮುಂದಿನ ಬಾವಿಕಟ್ಟೆಯಲ್ಲಿ ಸೇರಿದ್ದೆವು. ತೀರ್ಥಹಳ್ಳಿಗೆ ಹೋಗಿದ್ದನ್ನು ಹೇಳುತ್ತಾ ಅಕ್ಕ ಹೇಳಿದಳು, 'ಬಳೆ ಅಂಗಡಿಯಲ್ಲಿ ಬಹಳ ಜನರಿದ್ದರು, ಸಾಕಾಗಿ ಹೋಯಿತು' ಎಂದು. ಆಗ ನಾನು ದೊಡ್ಡ ಧ್ವನಿಯಲ್ಲಿ 'ಹೌದು, ಒಂದು ಮುತ್ತು ಕೊಡಲು ಎಷ್ಟು ಹೊತ್ತಾಯಿತು!' ಎಂದೆ. ಅಲ್ಲಿದ್ದವರೆಲ್ಲ ಜೋರಾಗಿ ನಗಲು ಆರಂಭಿಸಿದರು. ವಿಷಯ ಇಷ್ಟೇ... ಆಗೆಲ್ಲ ಕಿವಿಗೆ ಹೆಚ್ಚಾಗಿ ರಿಂಗ್ ಹಾಕುತ್ತಿದ್ದರು. ಆ ರಿಂಗ್‌ನ ಮುತ್ತು ಕಳೆದು ಹೋಗಿತ್ತು. ಅದಕ್ಕೆ ಮುತ್ತು ಹಾಕಿಸಲು ಹೋಗಿದ್ದೆ. ಅಂಗಡಿಯಾತ ಎಷ್ಟೊ ಹೊತ್ತಿನ ಬಳಿಕ ಮುತ್ತು ಹುಡುಕಿಕೊಟ್ಟಿದ್ದ.

**ಮಾಧವಿಲತಾ ಚಿಪ್ಪಳಕಟ್ಟೆ**



## ಉಂಡ ಮೇಲೆ...

ಸಂಬಂಧಿಕರ ಮನೆಗೆ ಔತಣಕ್ಕೆ ಹೋಗಿದ್ದೆವು. ನೆಂಟರಿಷ್ಟರೆಲ್ಲಾ ಸೇರಿದ್ದರು. ದಕ್ಷಿಣ ಕನ್ನಡದ ಬಾಣಸಿಗರು ರುಚಿಕಟ್ಟಾಗಿ ಅಡುಗೆ ತಯಾರಿಸಿದ್ದರು. ಬಾಳೆಎಲೆಯ ಮೇಲೆ ಅಲಂಕೃತವಾಗಿ ಬಡಿಸಿದ ತಿನಿಸುಗಳನ್ನು ನಾವೆಲ್ಲರೂ ಪೊಗದಸ್ತಾಗಿ ಹೊಡೆಯುತ್ತಿದ್ದೆವು. ಆಗ ನನಗೆ ಎಲ್ಲೋ ಓದಿದ ಚೀನಾದ ದಾರ್ಶನಿಕ ಕನ್ಫೂಶಿಯಸ್‌ನ ಮಾತು ನೆನಪಾಯಿತು. ಎಲ್ಲರಿಗೂ ಕೇಳುವಂತೆ, 'ಎಲ್ಲರೂ ಉಣ್ಣುತ್ತಾರೆ, ಕೆಲವರು ಅನುಭವಿಸಿ ಉಣ್ಣುತ್ತಾರೆ' ಎಂದೆ. ಎದುರಿನ ಸಾಲಿನಲ್ಲಿ ಕುಳಿತಿದ್ದ ನನ್ನ ಅಣ್ಣ, 'ಹೌದೌದು, ಕೆಲವರು ಊಟವಾದ ಮೇಲೆ ಅನುಭವಿಸುತ್ತಾರೆ' ಅನ್ನಬೇಕೆ?!

**ಸುರೇಶ್ ಹೆಗಡೆ**